

## ಅವರ ದಾರಿಯಲ್ಲಿಯೇ ಎದುರುಗೊಳ್ಳಬೇಕು

ಯುವಜನರು ಯಾವಾಗಲೂ ಮೊಬೈಲ್, ಅಂತರ್ಜಾಲದಲ್ಲೇ ಮುಳುಗಿರುತ್ತಾರೆ ಎಂಬುದೊಂದು ಆರೋಪವಿದೆ. ಆ ರೀತಿ ಆರೋಪ ಮಾಡಿಕೊಂಡಿದ್ದರೆ ಏನೂ ಸಾಧಿಸಿದಂತಾಗುವುದಿಲ್ಲ. ಅದರ ಬದಲು ಅವರು ಎಲ್ಲಿ ನಮಗೆ ಸುಲಭವಾಗಿ ಸಿಗುತ್ತಾರೋ ಅಲ್ಲೇ ಸಾಹಿತ್ಯವನ್ನೂ ತಲುಪಿಸುವ ಕೆಲಸ ಮಾಡಬೇಕು. ಅಂದರೆ ಆ ಕೆಲಸವನ್ನು ಅಂತರ್ಜಾಲ, ಮೊಬೈಲ್ ಸಾಧನಗಳನ್ನು ಬಳಸಿಕೊಂಡೇ ಸಾಧಿಸಬೇಕು. ಅವರು ಪುಸ್ತಕವನ್ನೇ ಕೊಂಡುಕೊಳ್ಳಬೇಕು ಎಂದು ನಿರೀಕ್ಷೆ ಮಾಡುವುದರಲ್ಲಿ ಅರ್ಥವಿಲ್ಲ.

ನಮ್ಮಲ್ಲಿನ ಸಾಕ್ಷರತೆ ಪ್ರಮಾಣ ಗಮನಿಸಿದಾಗ, ನಮ್ಮ ಸಾಹಿತ್ಯ ಯಾವ ಮಟ್ಟಿಗೆ ಓದುಗರನ್ನು ತಲುಪಬೇಕಿತ್ತೋ ಅದರಲ್ಲಿ ಶೇ. 6ರಷ್ಟು ಮಾತ್ರ ನಾವು ತಪುಪಿದ್ದೇವೆ. ಇನ್ನೂ ಶೇ. 94ರಷ್ಟು ಜನರನ್ನು ತಲುಪುವ ಅವಕಾಶ ನಮಗಿದೆ. ತಂತ್ರಜ್ಞಾನ ಮತ್ತು ಆನ್‌ಲೈನ್ ವೇದಿಕೆಯನ್ನು ಬಳಸಿಕೊಂಡು ಈ ನಿರ್ವಾತವನ್ನು ತುಂಬಬಹುದು.

ಆಯಾ ಕಾಲಕ್ಕೆ ಅಗತ್ಯವಿರುವ ವಿಷಯಗಳು ಮತ್ತು ಚಾಲ್ತಿಯಲ್ಲಿರುವ ಮಾಧ್ಯಮದ ಮೂಲಕ ಜನರನ್ನು ತಲುಪಬೇಕು. ಕನ್ನಡ ಭಾಷೆಯಲ್ಲೇ ಜಗತ್ತಿನ ಸಾಹಿತ್ಯದ ಎಲ್ಲ ಶಾಖೆಗಳು ಕನ್ನಡಿಗರಿಗೆ ಸಿಗಬೇಕು. ಹೀಗೆ ಬೇರೆ ಬೇರೆ ವಿಚಾರಗಳು ಕನ್ನಡದಲ್ಲೇ ಸಿಕ್ಕರೆ ಕನ್ನಡದ ಬೆಳವಣಿಗೆಗೂ ಸಹಕಾರಿ.

**-ಪವಮಾನ ಪ್ರಸಾದ್,**
**ಮೈ ಲ್ಯಾಂಗ್ ಬುಕ್ಸ್ ಡಿಜಿಟಲ್**



ನಡೆಯುತ್ತಿದೆ. ಅದಕ್ಕೆಂದೇ ದೊಡ್ಡ ಮಟ್ಟದ ಬಂಡವಾಳವನ್ನು ಹೂಡಲೂ 'ಮೈ ಲಾಂಗ್ ಬುಕ್ಸ್' ತಂಡ ಸಜ್ಜಾಗಿದೆ.

### ವರ್ಚುವಲ್ ಪುಸ್ತಕದಂಗಡಿ

ಮೈ ಲ್ಯಾಂಗ್ ಬುಕ್ಸ್ ಪ್ರಕಟ ಮಾಡುವ ಡಿಜಿಟಲ್ ಪುಸ್ತಕಗಳನ್ನು ಖರೀದಿಸಲು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅಲ್ಲಿ ಕೊಡಲಾಗುವ ಲಿಂಕ್ ಮುಖಾಂತರ ಡಿಜಿಟಲ್ ಪೇಮೆಂಟ್ ಮಾಡಿ ಪುಸ್ತಕಗಳನ್ನು ಖರೀದಿಸಬಹುದು. ಆದರೆ ಯಾವುದೋ ವ್ಯಕ್ತಿ ಡಿಜಿಟಲ್ ಪೇಮೆಂಟ್ ವ್ಯವಸ್ಥೆಗೆ ಒಗ್ಗಿಕೊಂಡಿಲ್ಲ ಎಂದಾದರೆ ಅಂಥವರು ಈ ವರ್ಚುವಲ್ ಪುಸ್ತಕದಂಗಡಿಗೆ ಎಡತಾಕಬಹುದು.

'ಈ ಪುಸ್ತಕದಂಗಡಿಯವರು ಮೊದಲೇ ಹಣ ನೀಡಿ ಪುಸ್ತಕದ 50 ಡಿಜಿಟಲ್ ಪ್ರತಿಯನ್ನು ಖರೀದಿಸಿರುತ್ತಾರೆ ಎಂದುಕೊಳ್ಳೋಣ. ಗ್ರಾಹಕ ಈ ಪುಸ್ತಕದಂಗಡಿಯಲ್ಲಿ ನಗದು ಕೊಟ್ಟು ಡಿಜಿಟಲ್ ಪುಸ್ತಕ ಖರೀದಿಸಬಹುದು. ಆತ ಆ್ಯಪ್ ಮೂಲಕ ಪುಸ್ತಕ ಡೌನ್‌ಲೋಡ್ ಮಾಡಿಕೊಂಡರೆ ಸಾಕು, ಅದನ್ನು ತೆರೆದು ಓದಲು ಬೇಕಾಗುವ ಕೋಡ್/ಪಾಸ್‌ವರ್ಡ್ ಅನ್ನು ಅಂಗಡಿಯವನು ಕೊಡುತ್ತಾನೆ. ಆಮೇಲೆ ಅದನ್ನು ಆಫ್‌ಲೈನ್‌ನಲ್ಲಿಯೂ ಓದಲು ಸಾಧ್ಯ' ಹೀಗೆ ತಂತ್ರಜ್ಞಾನದ ವಿವಿಧ ಮಗ್ಗುಲುಗಳನ್ನು ಪರಿಚಯಿಸುತ್ತಾ ಹೋಗುತ್ತಾರೆ ಪವಮಾನ. ಸದ್ಯ ಮೊಬೈಲ್ ಆ್ಯಪ್ ಸಿದ್ಧವಾಗುತ್ತಿದೆ. ಮುದ್ರಣ ಮಾದರಿಗಿಂತ ಕಡಿಮೆ ದರದಲ್ಲಿ ಡಿಜಿಟಲ್ ಪುಸ್ತಕಗಳು ಸದ್ಯದಲ್ಲಿಯೇ ಸಾಹಿತ್ಯಪ್ರಿಯರ ಸ್ಮಾರ್ಟ್‌ಫೋನ್ ಸೇರಲಿವೆ.

ಈ ಪ್ರಯತ್ನದ ಹಿನ್ನೆಲೆಯಲ್ಲಿ ಇರುವವರು ಪವಮಾನ ಮತ್ತು ವಸಂತ್ ಎಂಬ ಯುವಕರು. ಮೂಲತಃ ಚಿತ್ರದುರ್ಗದವರಾದ ಪವಮಾನ ಎಂಜಿನಿಯರಿಂಗ್ ಮುಗಿಸಿ ಉದ್ಯೋಗ ನಿಮಿತ್ತ ಬೆಂಗಳೂರು ಸೇರಿದವರು. ಅಲ್ಲಿಂದ ಬೇರೆ ಬೇರೆ ದೇಶಗಳಿಗೆ ತೆರಳಿ ಕೆಲಸ ಮಾಡಿದ ಅನುಭವ ಪಡೆದಿದ್ದಾರೆ. ಸ್ವಂತದ ಎರಡು ಕಂಪನಿಗಳನ್ನು ಕಟ್ಟಿ, ಬೆಳೆಸಿ ಅದನ್ನು ಮಾರಾಟ ಮಾಡಿದ್ದಾರೆ. ಈಗ ಸಂಪೂರ್ಣವಾಗಿ ಇದೇ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

ವಸಂತ್ ಎಂಬುವವರು ಅವರ ಇನ್ನೊಬ್ಬ ಸಹವರ್ತಿ. ಅವರೂ ಐಟಿ ಹಿನ್ನೆಲೆಯವರೇ. ಕನ್ನಡಕ್ಕಾಗಿ ಕೆಲಸ ಮಾಡುವ ಉತ್ಸಾಹಿ. ಅವರು ಮಾರ್ಕೆಟಿಂಗ್, ಪ್ರಮೋಷನ್ಸ್, ಕಂಟೆಂಟ್ ಕಡೆಗೆ ಗಮನ ನೀಡುತ್ತಾರೆ. ಒಂದು ತಾಂತ್ರಿಕ ತಂಡವಿದೆ. ಸಂಪಾದಕೀಯ ಸಲಹೆಗಾರರಾಗಿ ಹಿರಿಯ ಸಾಹಿತಿ ಎಸ್. ದಿವಾಕರ್ ಇದ್ದಾರೆ.

'ಒಟ್ಟಾರೆ ಬರಹಗಾರರನ್ನು ಗೆಲ್ಲಿಸಬೇಕು. ಅವರು ತಾವು ಮಾಡುವ ಕೆಲಸದಿಂದ ಹೆಸರು ಮತ್ತು ಹಣ ಗಳಿಸುವಂತಾಗಬೇಕು. ಆಗ ಹೊಸ ಹೊಸ ಪ್ರಯೋಗ ಮಾಡಲು ಪ್ರೋತ್ಸಾಹ ಸಿಕ್ಕಂತಾಗುತ್ತದೆ' ಎಂದು ಪವಮಾನ ಹೇಳುತ್ತಾರೆ. ಬರುವ ಫೆಬ್ರುವರಿಯಲ್ಲಿ ಮೈ ಲ್ಯಾಂಗ್ ಬುಕ್ಸ್ ಓದುಗರಿಗೆ ಸಿಗುತ್ತದೆ. ನಾಲ್ಕೈದು ಪುಸ್ತಕಗಳ ಪ್ರಕಟಣೆಗೆ ಸಿದ್ಧತೆ ನಡೆಯುತ್ತಿದೆ. ಜೊತೆಗೆ ಈಗಾಗಲೇ ಬಂದಿರುವ ಜನಪ್ರಿಯ ಪುಸ್ತಕಗಳ ಮರು ಪ್ರಕಟಣೆಗೂ ಕೆಲಸ ನಡೆಯುತ್ತಿದೆ.

ಹೀಗೆ ಹೊಸಕಾಲಕ್ಕೆ ಹೊಸ ರೀತಿಯಲ್ಲಿ ಹೊಸ ದಾರಿಗಳಲ್ಲಿ ಕನ್ನಡವನ್ನು ಕಟ್ಟುವ ಹಲವು ಬಗೆಯ ಶೋಧನೆಗಳು ನಡೆಯುತ್ತಲೇ ಇವೆ. ಈ ಪ್ರಯತ್ನಗಳ ಮುಂಚೂಣಿಯಲ್ಲಿರುವ ಬಹುತೇಕರು ತರುಣಪೀಳಿಗೆಯವರು ಎಂಬ ಸಂಗತಿ ಕನ್ನಡದ ಭವಿಷ್ಯದ ಮೇಲೆ ಬಿದ್ದಿರುವ ಹಲವು ಬರೆಗಳಿಗೆ ಹಚ್ಚುವ ಮುಲಾಮಿನಂತೆಯೇ ಗೋಚರವಾಗುತ್ತದೆ. ಈ ಮುಲಾಮೇ ಮುಂದೆ ಕನ್ನಡಮ್ಮನ ಕಾಡುತ್ತಿರುವ ರೋಗಗಳನ್ನು ವಾಸಿಗೊಳಿಸಿ ಹೊಸ ಹರೆಯವನ್ನು ದಯಪಾಲಿಸಬಹುದು. ■